1250 ಶಾಲೆಗಳಲ್ಲಿ ಶೌಚಾಲಯಕ್ಕೆ 63 ಕೋ.ರೂ.



ಹೊಸ ಶಾಲೆ ತೆರೆಯುವಾಗಲೇ ಶೌಚಾಲಯ ಕಡ್ಡಾಯ ನಿಯಮ ಮಾಡಿದ್ರೆ ಈ ಖರ್ಚು ಇರೋಲ್ಲ!




'೨೦ ಕೋಟಿ' ಡಕ್ ಔಟ್.... ಬೌಲ್ಡ್ ಬೈ... ೨ ಲಕ್ಷ!.

**ಟೀಚರ್:** ವಿಧಾನ ಸಭೆ ಎಂದರೇನು?
**ಚಿಂಟು:** ಆಯ್ಕೆಯಾಗಿ ಬಂದ ಆಗರ್ಭ ಶ್ರೀಮಂತರು, ಬಡತನದ ಬಗ್ಗೆ ಚರ್ಚೆ ಮಾಡುವ ಸ್ಥಳ ಮೇಡಂ.

***

**ಸುಮಾ:** ಸ್ವಲ್ಪ ಉಪ್ಪು ಜಾಸ್ತಿ ಹಾಕಿದ್ದಕ್ಕೆ ನನ್ನ ಅತ್ತೆ ಸಿಕ್ಕಾಪಟ್ಟೆ ಬೈದುಬಿಟ್ರು ಕಣೆ.
**ರಮಾ:** ಯಾವುದರಲ್ಲಿ? ಸಾಂಬಾರಿನಲ್ಲೋ ಅಥವಾ ಪಲ್ಯದಲ್ಲೋ?
**ಸುಮಾ:** ಪಾಯಸದಲ್ಲಿ ಕಣೆ.

***

**ಸುಬ್ಬ:** ಲೋ... ತಿಮ್ಮ ರೇಡಿಯೊ ಮತ್ತು ಹೆಂಡತಿಗೆ ಇರುವ ವ್ಯತ್ಯಾಸ ಏನಂತ ಗೊತ್ತಾ?
**ತಿಮ್ಮ:** ಗೊತ್ತು ಕಣೋ. ರೇಡಿಯೊ ಕೇಳುವುದಕ್ಕೆ ಚಂ. ಆದರೆ ನೋಡುವುದಕ್ಕೆ ಅಷ್ಟೊಂದು ಚೆಂದವಿಲ್ಲ. ಹಾಗೆಯೇ ಹೆಂಡತಿಯೂ ನೋಡುವುದಕ್ಕೆ ಚೆಂದ. ಅವಳ ಮಾತು ಕೇಳುವುದಕ್ಕೆ ಕಷ್ಟ.

***

**ಡಾಕ್ಟರ್:** ನಿಮಗೆ ಫ್ಯಾಟಿ ಲೀವರ್ ಆಗಿದೆ.
**ಕುಡುಕ ರೋಗಿ:** (ಭಯದಿಂದ) ಹಾಗೆಂದರೆ ಏನು ಡಾಕ್ಟ್ರೆ? ಏನಾದರೂ ಸಮಸ್ಯೆ ಇದೆಯೇ?
**ಡಾಕ್ಟರ್:** ನಿಮ್ಮ ಲೀವರ್ ತುಂಬಾ ದೊಡ್ಡದಾಗಿದೆ ಅಂತ ಅರ್ಥ.
**ಕುಡುಕ ರೋಗಿ:** (ತುಂಬಾ ಖುಷಿಯಿಂದ) ಹಾಗಾದರೆ ಲೀವರ್‌ನಲ್ಲಿ ಇನ್ನೂ ಜಾಸ್ತಿ ಎಣ್ಣೆ ಹಿಡಿಸುತ್ತಾ ಡಾಕ್ಟ್ರೆ?

***

**ಟೀಚರ್:** ಯಾಕೋ ಬಂಟಿ, ಕ್ಲಾಸ್‌ನಲ್ಲಿ ನಿದ್ದೆ ಮಾಡ್ತಿದ್ದೀಯಾ?
**ಬಂಟಿ:** ಮುಂದಿನ ಭವ್ಯ ಭವಿಷ್ಯಕ್ಕಾಗಿ ಕನಸು ಕಾಣಬೇಕು ಅಂತ ನೀವೆ ತಾನೇ ಹೇಳಿದ್ದು ಮೇಡಂ. ನಿದ್ದೆ ಮಾಡದೆ ಕನಸು ಕಾಣುವುದಕ್ಕೆ ಹೇಗೆ ಸಾಧ್ಯ ಹೇಳಿ?

***

**ಪತ್ನಿ:** ರೀ... ಪಕ್ಕದ ಮನೆಯ ರಂಗಣ್ಣನಿಗೆ ಏನಾದ್ರೂ ಹುಚ್ಚು ಹಿಡಿದಿದೆಯಾ? ಇಷ್ಟೊಂದು ಜೋರಾಗಿ ಮಳೆ ಬರುತ್ತಿದ್ದರೂ ಮಳೆಯಲ್ಲಿ ನಿಂತು ಕಾರು ತೊಳೆಯುತ್ತಿದ್ದಾರೆ.
**ಪತಿ:** ನಮಗ್ಯಾಕೆ ಕಂಡವರ ಮನೆ ಸುದ್ದಿ. ಆ ಕೊಡೆ ಕೊಡು. ಮನೆ ಮೇಲೆ ಗಿಡಕ್ಕೆ ನೀರು ಹಾಕಿ ಬರಬೇಕು.

***

**ವಿಕ್ಕಿ:** ನಿಮ್ಮ ನಾಯಿ ತುಂಬಾ ಚುರುಕಾಗಿದೆ. ಬೆಲ್ಟ್ ಮೇಲೆ ನಂಬರ್ ಬೇರೆ ಇದೆಯಲ್ಲ?
**ಪಿಂಕಿ:** ಅದು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದೆ.
**ವಿಕ್ಕಿ:** ನೋಡೋಕೆ ಹಾಗೆ ಕಾಣಿಸೋದೆ ಇಲ್ವಲ್ಲ?
**ಪಿಂಕಿ:** ಅದು ಸಿ.ಐ.ಡಿ ವಿಭಾಗದಲ್ಲಿದೆ.

***

**ಮೇಷ್ಟ್ರು:** ಆಕ್ಸ್‌ಫರ್ಡ್ ಎಂದರೇನು?
**ವಿದ್ಯಾರ್ಥಿ:** ಆಕ್ಸ್ ಅಂದರೆ ಎತ್ತು. ಫೊರ್ಡ್ ಅಂದರೆ ಗಾಡಿ. ಹಾಗಾಗಿ ಆಕ್ಸ್‌ಫರ್ಡ್ ಎಂದರೆ ಎತ್ತಿನ ಗಾಡಿ ಅಂತ ಸರ್.

***

ಮಹಿಳಾ ಮೀಸಲಾತಿ ಮಸೂದೆ ನಾಪಾಸ್



ಬುದ್ಧಿ... ನೀವು ಸರಿಯಾಗಿ ಓದಿಕೊಂಡು ಹೋಗಿದ್ರೆ ಪಾಸ್ ಆಗ್ತಿತ್ತೇನೋ!

**ಮೇಷ್ಟ್ರು:** ಅಭಿವೃದ್ಧಿ ಎಂದರೇನು?
**ಗುಂಡ:** ಇನ್‌ಸ್ಟಾಗ್ರಾಂನಲ್ಲಿ ಒಂದು ಪೋಸ್ಟ್ ಹಾಕಿದೆ. ಅದಕ್ಕೆ 100 ಲೈಕ್ಸ್ ಬಂದವು. ಮರುದಿನ ಪೋಸ್ಟ್ ಹಾಕಿದೆ. ಅದಕ್ಕೆ 120 ಲೈಕ್ಸ್ ಬಂದವು. ವ್ಯತ್ಯಾಸದ ಆ 20 ಲೈಕ್ಸ್‌ಗಳ ಏರಿಕೆಯನ್ನೇ ಅಭಿವೃದ್ಧಿ ಅಂತೀವಿ ಸರ್.

***

**ತಾಯಿ:** ರೀ... ಮಗಳು ಮೊಬೈಲ್ ನೋಡಿ ದಾರಿ ತಪ್ಪಿದ್ದಾಳೆ.
**ತಂದೆ:** ಗೂಗಲ್ ಮ್ಯಾಪ್ ನೋಡಿ ಸರಿ ದಾರಿಲಿ ಬರ್ತಾಳೆ ಬಿಡು.

***

**ಗುಂಡ:** ಬಾಗಿಲು ಬಡಿಯುತ್ತಿರುವವರು ಯಾರು?
**ಪೋಲಿಸ್:** ನಾವು ಪೋಲಿಸರು, ನಿಮ್ಮ ಜೊತೆ ಸ್ವಲ್ಪ ಮಾತನಾಡಬೇಕು.
**ಗುಂಡ:** ನೀವು ಎಷ್ಟು ಜನ ಇದ್ದೀರಿ?
**ಪೋಲಿಸ್:** ಮೂರು ಜನ.
**ಗುಂಡ:** ಹಾಗಾದ್ರೆ ನೀವು ನೀವೆ ಮಾತನಾಡಿಕೊಳ್ಳಿ. ನಾನ್ಯಾಕೆ ಸುಮ್ನೆ.

***

ಗಂಡ ಹೆಂಡತಿ ಇಬ್ಬರೂ ಜೊತೆಗೆ ಊಟ ಮಾಡಿದರು. ಊಟ ಮುಗಿದ ತಕ್ಷಣ ಗಂಡ ಇಬ್ಬರ ತಟ್ಟೆಗಳನ್ನು ತೊಳೆದು ಇಟ್ಟರು.
**ಹೆಂಡತಿ:** ನನ್ನ ಮರ್ಯಾದೆ ತೆಗೆದು ಬಿಟ್ರಿ ನೀವು.
**ಗಂಡ:** ಯಾಕೆ ಏನಾಯಿತು?
**ಹೆಂಡತಿ:** ನಾವು ಊಟ ಮಾಡಿದ್ದು ಮನೆಯಲ್ಲಲ್ಲ, ಹೋಟೆಲ್‌ನಲ್ಲಿ.

***

**ಬಾಸ್:** ಯಾಕೆ ಲೇಟು?
**ಗುಂಡ:** ಸರ್ ಗಾಡಿ ಕೈ ಕೊಡ್ತು, ಅದಕ್ಕೆ ಲೇಟಾಯ್ತು.
**ಬಾಸ್:** ಬಸ್‌ನಲ್ಲಿ ಬರಬೇಕಿತ್ತು.
**ಗುಂಡ:** ಬಸ್ ಖರೀದಿಸುವಷ್ಟು ದುಡ್ಡಿಲ್ಲ ಸರ್.

ಸಂಗ್ರಹ: ಶರದ ಕುಲಕರ್ಣಿ, ಬೀದರ್